ಮಾಡುತ್ತೇವೆ

ಶ್ರೀ ಡಿ.ಕೆ. ಶಿವಕುಮಾರ್ :– Thank you

(2) ವಿಷಯ: ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ವಿಶೇಷ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ವರ್ಗದವರಿಗೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ದೊರಕುವ ಸಂಬಳ ಸೌಲಭ್ಯಗಳನ್ನು ನೀಡದಿರುವ ಬಗ್ಗೆ.

ಶ್ರೀ ಯು.ಟಿ. ಖಾದರ್(ಮಂಗಳೂರು): ಮಾನ್ಯ ಅಧ್ಯಕ್ಷರೆ, ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ವಿಶೇಷ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ವರ್ಗದವರಿಗೆ ಸರ್ಕಾರಿ ಪ್ರಾಥವಿಕ ಶಾಲಾ ಶಿಕ್ಷಕರಿಗೆ ದೊರಕುವ ಸಂಬಳ ಸೌಲಭ್ಯಗಳನ್ನು ನೀಡದಿರುವ ಬಗ್ಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ,

ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯಲ್ಲಿ ವಿಶೇಷ ಶಾಲೆಗಳಿಗೆ ಸಹಾಯಧನ ನೀಡಲು ರಾಜ್ಯ ಅನುದಾನ ಸಂಹಿತೆ 1982 ಜಾರಿಯಲ್ಲಿರುತ್ತದೆ. ಅದರಂತೆ ವಿಶೇಷ ಶಾಲೆಗಳಿಗೆ ಜಿಲ್ಲಾ ವಲಯದಲ್ಲಿ ಅನುದಾನ ಒದಗಿಸುವ ಮುಂದುವರೆದ ಯೋಜನೆ ಅನುಷ್ಠಾನದಲ್ಲಿರುತ್ತದೆ.

ಅದರಂತೆ ರಾಜ್ಯದಲ್ಲಿ ಸ್ವಯಂಸೇವಾ ಸಂಸ್ಥೆಗಳು ನಡೆಸುತ್ತಿರುವ 8 ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆಗಳಿಗೆ ಅನುದಾನವನ್ನು ಒದಗಿಸಲಾಗುತ್ತದೆ. ಸದರಿ ಶಾಲೆಗಳ ವಿವರ ಕೆಳಕಂಡಂತಿದೆ.

1. ಬಾಲಮನೋವಿಕಾಸ ಕೇಂದ್ರ, ಮಲ್ಲೇಶ್ವರಂ, ಬೆಂಗಳೂರು
2. ಸೋಫಿಯಾ ಆಪರ್ಚುನಿಟಿ ಶಾಲೆ, ಹೈಗ್ರೌಂಡ್ಸ್, ಪ್ಯಾಲೇಸ್ ರಸ್ತೆ, ಬೆಂಗಳೂರು
3. ಮಾಥ್ರೋಮಾ ಅಪರ್ಚುನಿಟಿ ಸ್ಕೂಲ್, ಬೇತಲ್ ನಗರ, ಕೆ.ಆರ್.ಪುರಂ, ಬೆಂಗಳೂರು
4. ಬುದ್ದಿಮಾಂದ್ಯ ಮಕ್ಕಳ ವಿಶೇಷ ಶಾಲೆ, ಹೊಸೂರು ರಸ್ತೆ, ಬೆಂಗಳೂರು
5. ಆರಾಧನಾ ಸ್ಕೂಲ್ ಫಾರ್ ಸ್ಲೋಲರ್ನರ್ಸ್, ಪಾರ್ವತಿನಗರ, ಬೆಳಗಾಂ
6. ಡಾ॥ ಸ್ಪೀನರ್ಸ್ ಕ್ಯೂರೇಟಿವ್ ಎಜುಕೇಷನಲ್ ಇನ್ಸ್ಟಿಟ್ಯೂಟ್ ಫಾರ್ ದಿ ಮೆಂಟಲಿ ರಿಟಾರ್ಡೆಡ್, ಡಿ.ಸಿ. ಕಾಂಪೌಂಡ್, ಧಾರವಾಡ

7. ಸೇಂಟ್ ಆಗ್ನೇಸ್ ವಿಶೇಷ ಶಾಲೆ, ಬೈಂದೂರು, ಮಂಗಳೂರು–2
8. ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ, ವಿದ್ಯಾನಗರ, ಶಿವಮೊಗ್ಗ.

ಮೇಲಿನ ರಾಜ್ಯ ಅನುದಾನದಡಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ವಿಶೇಷ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ವರ್ಗದವರಿಗೆ ಸರ್ಕಾರಿ ಪ್ರಾಥಮಿಕ ಶಾಲಾ/ಪ್ರೌಢ ಶಾಲಾ ಶಿಕ್ಷಕರಿಗೆ ಹಾಗೂ ಶಿಕ್ಷಕೇತರರಿಗೆ ನೀಡಲಾಗುತ್ತಿರುವ ವೇತನ ಶ್ರೇಣಿಯನ್ನು ನೀಡಲಾಗುತ್ತಿದೆ. ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ಕೇವಲ 8 ಶಾಲೆಗಳಿಗೆ ಮಾತ್ರ ಸೀಮಿತವಾಗಬಾರದು. ಬಹುಶ: 2001ನೇ ಇಸವಿಯ ಜನಗಣತಿ ಪ್ರಕಾರ 9 ಲಕ್ಷ ಬುದ್ಧಿಮಾಂದ್ಯ ಮತ್ತು ಅಂಗವಿಕಲ ಮಕ್ಕಳು ನಮ್ಮ ರಾಜ್ಯದಲ್ಲಿದ್ದಾರೆ. ಇಷ್ಟು ಮಕ್ಕಳಿಗೆ ಸರಾಸರಿ ಮೂರೂವರೆ ಸಾವಿರ ಶಾಲೆಗಳನ್ನು ನಿಜವಾಗಿ ನಾವು ಸ್ಥಾಪಿಸಬೇಕಿತ್ತು. ಈಗ ಕೇವಲ 150 ಶಾಲೆಗಳಿವೆ. ಅದರಲ್ಲಿ ಕೆಲವರು ಕಷ್ಟಪಟ್ಟು ನಡೆಸುತ್ತಿದ್ದಾರೆ. ಆದ್ದರಿಂದ, 8 ಶಾಲೆಗಳಿಗೆ ಮಾತ್ರ ಅಲ್ಲ, ಈ 150 ಶಾಲೆಗಳಿಗೂ grant in aid ಕೊಡುವ ಹೊಸ ಯೋಜನೆಯನ್ನು ಸರ್ಕಾರ ಮಾಡಬೇಕು. ಬಹುಶ: ಈ ಶಾಲೆಗಳನ್ನು ಯಾರು ಸರಿಯಾಗಿ ನಡೆಸುತ್ತಿಲ್ಲವೋ ಆ ಬಗ್ಗೆ ಒಂದು ಸಮಿತಿ ರಚಿಸಿ ಅಂಥ ಶಾಲೆಗಳನ್ನು ರದ್ದುಪಡಿಸುವಂಥ ಕೆಲಸ ಮಾಡಿ. ಯಾರು ಅತ್ಯುತ್ತಮವಾಗಿ ಕೆಲಸ ಮಾಡುತ್ತಾರೋ ಅಂಥ ಶಾಲೆಗಳಿಗೆ grant in aid ಕೊಡುವಂಥ ಕೆಲಸವನ್ನು ಸರ್ಕಾರ ಆದೇಶ ಹೊರಡಿಸುವುದರ ಮುಖಾಂತರ ಕೊಡಬೇಕು. ಇದರ ಜೊತೆಯಲ್ಲಿ ಬುದ್ಧಿಮಾಂದ್ಯ ಮತ್ತು ಅಂಗವಿಕಲ ಮಕ್ಕಳಿಗೂ ಕೂಡ ಬೇರೆಯವರಿಗೆ ಬಿಸಿಯೂಟ, ಉಚಿತ ಪುಸ್ತಕ ಮತ್ತು dress ಅನ್ನು ಕೊಡುವ ಹಾಗೆ ಸರ್ಕಾರದ ವತಿಯಿಂದ ಕೊಡಬೇಕು. ಹಾಗೆಯೆ, ಇವರ ಕಲ್ಯಾಣಕ್ಕಾಗಿ ಬಜೆಟ್‌ನಲ್ಲಿ 20 ಕೋಟಿ ರೂಪಾಯಿಗಳನ್ನು ಇಟ್ಟಿರುವುದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ, ಅಷ್ಟು ಹಣ ಯಾವುದಕ್ಕೂ ಸಾಕಾಗುವುದಿಲ್ಲ. ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳಲ್ಲಿ ಇಂಥ ಮಕ್ಕಳಿಗಾಗಿ 150 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಇಟ್ಟಿದ್ದು ಸಂಪೂರ್ಣವಾದ ಸಹಕಾರವನ್ನು ಕೊಡುತ್ತಿದ್ದಾರೆ. ಆದ್ದರಿಂದ, ಸರ್ಕಾರದಲ್ಲಿ ನನ್ನ ಕಳಕಳಿಯ ವಿನಂತಿ ಏನೆಂದರೆ, ಸಂಪೂರ್ಣವಾದ ಪ್ರೋತ್ಸಾಹವನ್ನು ಇಂಥ ಮಕ್ಕಳಿಗೆ ಕೊಡಬೇಕು. ಅದರ ಜೊತೆಗೆ ಅನುದಾನ ಕೊಡುವ ಕುರಿತಂತೆ Disability Act ಪ್ರಕಾರ ರಾಜ್ಯಸರ್ಕಾರದ ಪ್ರತಿಯೊಂದು ಇಲಾಖೆಯಲ್ಲೂ ಕೂಡ 3% ಅನುದಾನವನ್ನು ಇಡಬೇಕೆನ್ನುವುದು ಇದೆ. ಅದನ್ನು ಅನುಷ್ಠಾನಗೊಳಿಸಲಿಕ್ಕೆ ಸರ್ಕಾರ ಎಲ್ಲಾ ಇಲಾಖೆಗಳಿಗೆ ಸೂಚನೆ ಕೊಡಬೇಕು. ಬಹುಶ: ನಮ್ಮ ರಾಜ್ಯಮಟ್ಟದ ಎಲ್ಲಾ ಇಲಾಖೆ, ಜಿಲ್ಲಾಮಟ್ಟದ

ಇಲಾಖೆ, ಸ್ಥಳೀಯ ಸಂಸ್ಥೆಗಳ ಇಲಾಖೆ ಹೀಗೆ ಎಲ್ಲಾ ಇಲಾಖೆಗಳು ಕೂಡ ಒಳ್ಳೆಯ ಆಶಯವನ್ನು ಇಟ್ಟುಕೊಂಡು 3% ಹಣವನ್ನು ಎಲ್ಲಾ ಶಾಲೆಗಳಿಗೆ ನೀಡಿ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಮಾನಾಥ ರೈ: ಈಗ ಸಂಬಂಧಪಟ್ಟ ಸಚಿವರು ಏನು ಓದಿದರು ಅದರ ಒಂದು ಕಾಪಿಯನ್ನು ನಮಗ್ಯಾರಿಗೂ ಕೊಟ್ಟಿಲ್ಲ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು ನಗರ ದಕ್ಷಿಣ): ಮಾನ್ಯ ಅಧ್ಯಕ್ಷರೆ, ಕಳೆದ 55 ವರ್ಷಗಳಲ್ಲಿ ಪ್ರಪ್ರಥಮವಾಗಿ ಅಂಗವಿಕಲರು ಅದರಲ್ಲೂ ಬುದ್ಧಿಮಾಂದ್ಯ ಮಕ್ಕಳ ಶಾಲೆಗಳ ಅಧ್ಯಾಪಕರನ್ನು ಗುರುತಿಸಿ ಅವರಿಗೆ ಅನುದಾನವನ್ನು ಕೊಡಬೇಕೆನ್ನುವಂಥ ಒಂದು ದಿಟ್ಟ ಹೆಜ್ಜೆಯನ್ನು ಮಾನ್ಯ ಮುಖ್ಯಮಂತ್ರಿಯವರು ತೆಗೆದುಕೊಂಡಿದ್ದು, ಬಜೆಟ್‌ನಲ್ಲಿ 20 ಕೋಟಿ ರೂಪಾಯಿಗಳನ್ನು ಕಾದಿರಿಸಿದ್ದಾರೆ, ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. Registered ಆದ ಕೇವಲ 8 ಶಾಲೆಗಳಿಗೆ ಮಾತ್ರ ಅಲ್ಲ, 157 ಶಾಲೆಗಳಿವೆ. ಬಹುಶ: ಅಲ್ಲಿರುವಂಥ ಒಂದೊಂದು ಮಗುವಿಗೂ ಆ teacher ಅವರಿಗೆ ಯಾವ ರೀತಿಯಾಗಿ ಶಿಕ್ಷಣ ಕೊಡುತ್ತಾರೆ ಮತ್ತು ಅವರು ಎಲ್ಲ ತರಹದ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ. ಬಜೆಟ್ ಪೂರ್ವಭಾವಿಯಾಗಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ಪದೇ ಪದೇ ಒತ್ತಾಯ ಮಾಡಿ ಅನುದಾನ ಬರುವ ರೀತಿಯಲ್ಲಿ ನಾವು ಮಾಡಿದ್ದೇವೆ. ಕೇವಲ 8 ಶಾಲೆಗಳಿಗೆ ಮಾತ್ರ ಕೊಡುವುದಲ್ಲ, ಹಾಗೆ ಮಾಡಿದರೆ ಅನ್ಯಾಯವಾಗುತ್ತದೆ, ಆದ್ದರಿಂದ 157 ಶಾಲೆಗಳಿಗೂ ಅದನ್ನು ವಿಸ್ತರಿಸಬೇಕೆಂದು ನಾನು ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತೇನೆ. ದಯವಿಟ್ಟು, ಮಾನ್ಯ ಮುಖ್ಯಮಂತ್ರಿಯವರಿಗೆ ಇರುವ ಆಶಯದ ಪ್ರಕಾರ ಅದನ್ನು ಅನುಷ್ಠಾನಕ್ಕೆ ತರಬೇಕೆಂದು ಕೇಳುತ್ತೇನೆ.

ಶ್ರೀ ಸುನಿಲ್ ಎ. ಹೆಗಡೆ: ಬುದ್ಧಿಮಾಂದ್ಯ ಮಕ್ಕಳ 8 ಶಾಲೆಗಳೇನಿವೆ ಅವುಗಳಲ್ಲಿ ಹೆಚ್ಚಿನ ಶಾಲೆಗಳು ಬೆಂಗಳೂರಿನಲ್ಲಿಯೇ ಇವೆ. ಇದು regional imbalance ಆಗುವುದರಿಂದ ತಾಲ್ಲೂಕಿಗೆ ಅಥವಾ ಜಿಲ್ಲೆಗೆ ಒಂದು ಯಾವುದಾದರೂ NGO ಮುಖಾಂತರ ಅಥವಾ ಸರ್ಕಾರದಿಂದ ಶಾಲೆಗಳನ್ನು ನಡೆಸಬೇಕು. ಏಕೆಂದರೆ, ಆ ಶಾಲೆಗಳಲ್ಲಿರುವ ಬುದ್ಧಿಮಾಂದ್ಯ ಮಕ್ಕಳಿಗೆ ಟೀಚರ್ಸ್ ಏನು ಕಲಿಸುತ್ತಾರೆ ಆ ಟೀಚರ್ಸ್ ಇತರೆ ಮಕ್ಕಳಿಗೆ ಕಲಿಸುವುದಕ್ಕಿಂತ ಹೆಚ್ಚಿಗೆ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಅವರು ಅಲ್ಲಿ ಉಳಿದುಕೊಳ್ಳಲು hostel facilities, ಖಾದರ್‌ರವರು ಹೇಳಿದ ಹಾಗೆ, ಬಿಸಿ ಊಟ ಕೊಟ್ಟು, ಸರ್ಕಾರದ ಏನೇನು schemes ಇವೆ ಅವೆಲ್ಲವನ್ನೂ ಕೊಟ್ಟು ಬುದ್ಧಿಮಾಂದ್ಯ ಮಕ್ಕಳಿಗೆ ಅನುಕೂಲವಾಗುವ ಹಾಗೆ ಮಾಡಬೇಕು. ಏಕೆಂದರೆ, ಸರ್ವ ಶಿಕ್ಷಣ ಅಭಿಯಾನ ಮುಂತಾದ ಬೇರೆ ಬೇರೆ ಕಾರ್ಯಕ್ರಮಗಳನ್ನು ರಾಜ್ಯ, ಕೇಂದ್ರ ಸರ್ಕಾರಗಳು ಮಾಡಿ

ಎಲ್ಲರಿಗೂ ಶಿಕ್ಷಣ ಕೊಡಬೇಕೆನ್ನುವ ಈ ಸಮಯದಲ್ಲಿ ಬುದ್ಧಿಮಾಂದ್ಯ ಮಕ್ಕಳಿಗೆ ಶಿಕ್ಷಣ ಕೊಟ್ಟು ನಮ್ಮ ದೇಶವನ್ನು ಪ್ರಗತಿಯತ್ತ ತೆಗೆದುಕೊಂಡು ಹೋಗಬೇಕಾಗಿದೆ. ಹೀಗಾಗಿ ತಾಲ್ಲೂಕಿಗೊಂದು at least ಜಿಲ್ಲೆಗೊಂದಾದರೂ ಬುದ್ಧಿಮಾಂದ್ಯ ಅಂಗವಿಕಲ ಮಕ್ಕಳಿಗೆ ಶಿಕ್ಷಣ ಕೊಡಲು ಶಾಲೆಗಳನ್ನು, hostel ಗಳನ್ನು ಸರ್ಕಾರ ಪ್ರಾರಂಭಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಬಿ. ರಮಾನಾಥ ರೈ: ಬುದ್ಧಿಮಾಂದ್ಯ ಮಕ್ಕಳ ಬಗ್ಗೆ ನಾವು ಮಾಡನಾಡುವ ಸಂದರ್ಭದಲ್ಲಿ ಅನುಕಂಪ ವ್ಯಕ್ತಪಡಿಸಿ, ಸಾಂತ್ವನ ಮಾತು ಹೇಳುತ್ತೇವೆ. ಅವರ ಭಾನೆಗಳು, ನಮ್ಮ ಭಾವನೆಗಳನ್ನು ತೋರ್ಪಡಿಸುವಾಗ ನಾವು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇವೆ. ಆದರೆ, ಇದೆಲ್ಲ ಕೇವಲ ಮಾತಿನ ವಸ್ತುವಾಗಬಾರದು. ನಿಜ ಅರ್ಥದಲ್ಲಿ ಆ ಕಾರ್ಯ ಆಗಬೇಕಾಗಿದೆ. ಇವತ್ತು 8 ಶಾಲೆಗಳಿಗೆ ಅನುದಾನ ಕೊಡುತ್ತಿದ್ದೀರಿ. ಇಂಥ ಶಾಲೆಗಳನ್ನು ನಡೆಸಬೇಕಾದರೆ ಕಷ್ಟವಿದೆ. ಬುದ್ಧಿಮಾಂದ್ಯ ಮಕ್ಕಳಿಗೆ ಎಲ್ಲಾ ರೀತಿಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಬೇಕಾದರೆ ಆ ಬುದ್ಧಿಮಾಂದ್ಯ ಮಕ್ಕಳ ಜೊತೆಯಲ್ಲಿ ಯಾವ ರೀತಿ ಶಿಕ್ಷಕರ ನಡವಳಿಕೆ ಇರಬೇಕೆನ್ನುವ ಬಗ್ಗೆ ನಾವು ತಿಳಿದುಕೊಂಡಿರತಕ್ಕ ಆಂಶ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕೊಡುತ್ತಿರುವ ಎಲ್ಲಾ ಸೌಲಭ್ಯಗಳನ್ನು ಈ ಶಿಕ್ಷಕರಿಗೂ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ, ವೇತನ, ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ಕೊಡುವುದರಲ್ಲಿ ನಿಧಾನವಾಗಬಾರದು. ಅವರೇ ಹೇಳಿದಂತೆ, ಬುದ್ಧಿಮಾಂದ್ಯ ಮಕ್ಕಳಿಗಾಗಿ ಶಾಲೆಗಳನ್ನೇನು ಪ್ರಾರಂಭಿಸಿದ್ದಾರೆ ಅಲ್ಲಿನ ಶಿಕ್ಷಕರಿಗೆ ಕೊಡಬೇಕಾದ ಎಲ್ಲಾ ಸೌಲಭ್ಯ ಕೊಡಬೇಕು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಗೌರವಾನ್ವಿತ ಸದಸ್ಯರುಗಳು ನೀಡಿದ ಸಲಹೆ ಮೇರೆಗೆ, ಅವರಿಗೊಂದು ಮಾಹಿತಿಯನ್ನು ನೀಡಲಿಕ್ಕೆಬಯಸುತ್ತೇನೆ. ರಾಜ್ಯದಲ್ಲಿ ಒಟ್ಟು 8 ಬುದ್ಧಿಮಾಂದ್ಯ ವಿಶೇಷ ಶಾಲೆಗಳಿವೆ ಎನ್ನುವುದನ್ನು ಈಗಾಗಲೇ ತಿಳಿಸಿದ್ದೇನೆ. ಕೇಂದ್ರದ ಯೋಜನೆಯಡಿ ಅದರ ಅನುದಾನವನ್ನು ಪಡೆದು 37 ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಜೊತೆಗೆ, ಅನುದಾನರಹಿತವಾಗಿ 49 ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆಗಳನ್ನು ಸ್ವಯಂಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. ರಾಜ್ಯ ಅನುದಾನದಡಿ 8 ಶಾಲೆಗಳು ಮಾತ್ರ ಇವತ್ತು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಯೋಗೀಶ್‌ಭಟ್‌ರವರು ಹೇಳಿದಂತೆ, 150 ಬುದ್ಧಿಮಾಂದ್ಯ ಮಕ್ಕಳ ಶಾಲೆಗಳು ಎಲ್ಲಿಯೂ ಇಲ್ಲ. ಅವು ಅಂಗವಿಕಲ ಶಾಲೆಗಳಾಗಿವೆ. ಅವು ವಿವಿಧ ಅಂಗವೈಕಲ್ಯತೆಗೆ ಒಳಪಟ್ಟಂಥ ಮಕ್ಕಳ ಶಾಲೆಗಳಾಗಿರುವುದರಿಂದ ಬುದ್ಧಿಮಾಂದ್ಯ ಮಕ್ಕಳ ವಿಚಾರದಲ್ಲಿ ಹೆಚ್ಚಿನ ಅನುದಾನವನ್ನು ನೀಡುವುದಕ್ಕೆ ಕೇಂದ್ರ ಸರ್ಕಾರಕ್ಕೂ, ರಾಜ್ಯ ಸರ್ಕಾರಕ್ಕೂ ಅವಕಾಶವಿದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಪ್ರಪ್ರಥಮ ಬಾರಿಗೆ 20 ಕೋಟಿ ರೂಪಾಯಿಗಳನ್ನು ನಮ್ಮ

ಆಯವ್ಯಯದಲ್ಲಿ ಒದಗಿಸಿದ್ದಾರೆ. ಇನ್ನು, ಪೂರಕವಾದ ವಿಚಾರದಲ್ಲಿ 3% ಕಡ್ಡಾಯವಾಗಿ ಅಂಗವಿಕಲರ ಅಧಿನಿಯಮದಡಿಯಲ್ಲಿ ಜಾರಿಗೆ ಕೊಡುವ ವಿಚಾರದಲ್ಲಿ ತುರ್ತು ಆದೇಶವನ್ನು ನೀಡಿ ಎಲ್ಲಾ ಇಲಾಖೆಗಳಿಂದ ಕ್ರಮ ವಹಿಸಿ ಈ ಹಣಕಾಸಿನ ನೆರವು ದೊರೆಯುವಂಥ ಕ್ರಮವನ್ನು ಸರ್ಕಾರ ಮಾಡುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಈ ವಿಚಾರವನ್ನು ತರುತ್ತೇನೆಂಬುದನ್ನು ಈ ಸಭೆಯ ಗಮನಕ್ಕೆ ತರುತ್ತೇನೆ.

(3) ವಿಷಯ: ಶ್ರೀ ತಿರುಪತಿ ತಿರುಮಲದಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನಕ್ಕೆ ಮೈಸೂರು ಸಂಸ್ಥಾನದ ವತಿಯಿಂದ ನೀಡಿರುವ ಆಭರಣ ಹಾಗೂ ಜಮೀನು, ಆ ಜಮೀನಿನಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಮತ್ತು ಅದರಿಂದ ಬರುವ ಆದಾಯದ ಬಗ್ಗೆ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೆ, ಶ್ರೀ ತಿರುಪತಿ ತಿರುಮಲದಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನಕ್ಕೆ ಮೈಸೂರು ಸಂಸ್ಥಾನದ ವತಿಯಿಂದ ನೀಡಿರುವ ಆಭರಣ ಹಾಗೂ ಜಮೀನು, ಆ ಜಮೀನಿನಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಮತ್ತು ಅದರಿಂದ ಬರುವ ಆದಾಯದ ಬಗ್ಗೆ ಗೃಹ ಹಾಗೂ ಮುಜರಾಯಿ ಇಲಾಖಾ ಸಚಿವರ ಗಮನ ಸೆಳೆಯುತ್ತೇನೆ.

ಡಾ: ವಿ.ಎಸ್. ಆಚಾರ್ಯ, ಗೃಹ ಹಾಗೂ ಮುಜರಾಯಿ ಸಚಿವರು:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ವಿವರವಾದ ಮಾಹಿತಿಯನ್ನು ಲಿಖಿತ ಮೂಲಕ ಕೊಟ್ಟಿದ್ದೇನೆ. ಬಹುಶ: ವಿವರವಾಗಿ ಓದಬೇಕೆಂದರೆ ಓದಬಹುದು. ಇಲ್ಲದಿದ್ದರೆ ಉತ್ತರ ಬಂದಿದೆ ಎಂದು ತಿಳಿದಿದ್ದೇನೆ.

ಕರ್ನಾಟಕದಿಂದ ತಿರುಮಲ-ತಿರುಪತಿ ಶ್ರೀ ವೆಂಕಟೇಶ್ವರ ಸ್ವಾಮಿಯ ದರ್ಶನಕ್ಕೆ ಹೋಗುವ ಭಕ್ತಾದಿಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸುವ ಉದ್ದೇಶದಿಂದ ಮೈಸೂರು ಮಹಾರಾಜರ ಕಾಲದಿಂದಲೂ ಕರ್ನಾಟಕ ರಾಜ್ಯ ಛತ್ರದಲ್ಲಿ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ಅಲ್ಲದೆ, ಶ್ರೀ ವೆಂಕಟೇಶ್ವರ ಸ್ವಾಮಿಯ ಪೂಜೆಗೆ ಸಾಹಿತ್ಯ/ಸಾಮಾಗ್ರಿಗಳನ್ನು ಹಿಂದಿನಿಂದ ನಡೆದು ಬಂದಂತೆ ಕರ್ನಾಟಕ ಸರ್ಕಾರದಿಂದ ಈಗಲೂ ನೀಡಲಾಗುತ್ತಿದೆ.

2. ಮೈಸೂರು ಮಹಾರಾಜರ ಕಾಲದಲ್ಲಿ ತಿರುಮಲ-ತಿರುಪತಿ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಒಡವೆಗಳು ಹಾಗೂ ಪೂಜಾ ಕೈಂಕರ್ಯದ ವಸ್ತುಗಳು ಈ ಕೆಳಕಂಡಂತಿವೆ:

ಕ್ರ.ಸಂ.	ಆಭರಣಗಳ ವಿವರಣೆ	ಸಂಖ್ಯೆ	ತೂಕ
1.	ಚಿನ್ನದ ಛತ್ರಿ (ಕೊಡೆ)		401 ತೊಲ ಬಂಗಾರ ಮತ್ತು
	ಜೊತೆ ಬೆಳ್ಳಿಯ ತಟ್ಟೆ	01	517 ತೊಲ ಬೆಳ್ಳಿ